**UNIVERSITY LIBRARY**

**Newspaper's Agri Clippings**

For more information visit University Library Website
Web - uasbagrilibindia.org
E-mail- librarian@uasbangalore.edu.in

27-06-2026
Saturday

## ರೈತ ಮಿತ್ರ



**ತೊಗರಿ ಬಿತ್ತನೆ ಮಾಡಲು ಭೂಮಿ ಸಿದ್ಧತೆ ಮಾಡಿದ್ದು, ಈ ಮುಂಗಾರಿಗೆ ಸೂಕ್ತವಾದ ತಳಿಗಳ ಬಗ್ಗೆ ಮಾಹಿತಿ ನೀಡಿ.**

| **ಪ್ರಶಾಂತ್** ತುಮಕೂರು

ಪ್ರಸ್ತುತ ವರ್ಷ ಮುಂಗಾರು ತಡವಾಗಿದ್ದು, ಕೊರತೆಯ ಲಕ್ಷಣಗಳು ಗೋಚರಿಸುತ್ತಿದೆ. ತೊಗರಿ ಬಿತ್ತನೆ ತಡವಾಗುತ್ತಿದ್ದು, ಬಿ.ಆರ್.ಜಿ-1, ಬಿ.ಆರ್.ಜಿ-2, ಬಿ.ಆರ್.ಜಿ-3, ಬಿ.ಆರ್.ಜಿ-5 (ಕಾಲಾವಧಿ: 150 ರಿಂದ 180 ದಿನಗಳು) ಜೂನ್ ಕೊನೇ ಅಥವಾ ಜುಲೈನಲ್ಲಿ ಬಿತ್ತನೆಗೆ ಸೂಕ್ತ ತಳಿಗಳು. ತಡವಾದ ಮುಂಗಾರಿಗೆ (ಆಗಸ್ಟ್) ಬಿ.ಆರ್.ಜಿ-4 ಬಿತ್ತನೆ ಮಾಡಬಹುದು(ಕಾಲಾವಧಿ: 145 ರಿಂದ 150 ದಿನಗಳು). ಈ ತಳಿಗಳು ಪೂರ್ಣಬೆಳೆಯಾದಲ್ಲಿ 5-6 ಹಾಗೂ ಮಿಶ್ರಬೆಳೆಯಾಗಿ ಬೆಳೆದಲ್ಲಿ 1-2 ಕ್ವಿಂಟಾಲ್ ನಷ್ಟು ಕಾಳಿನ ಇಳುವರಿ ನೀಡುವ ಸಾಮರ್ಥ್ಯ ಹೊಂದಿವೆ. ತೊಗರಿಯನ್ನು ತರಕಾರಿಗೆ ಬಿತ್ತುವುದಾದರೆ ಬಿ.ಆರ್.ಜಿ-1, ಬೇಳೆ ಮತ್ತು ತರಕಾರಿಗೆ ಉಳಿದ ತಳಿಗಳನ್ನು ಬಳಸಬಹುದು. ಬಿ.ಆರ್.ಜಿ-3, ಬಿ.ಆರ್.ಜಿ-5 ಸೊರಗು ರೋಗ ಮತ್ತು ಬಂಜೆ ರೋಗನಿರೋಧಕ ತಳಿಗಳಾಗಿವೆ. ಬಂಜೆ ರೋಗವನ್ನು ತಡೆಗಟ್ಟಲು ಪ್ರತಿ ಲೀಟರ್ ನೀರಿಗೆ 2 ಬಾರಿ ಶೇ.0.1ರಂತೆ ಪ್ರೋಪಾರ್ಗೈಟ್ 57 ಇ.ಸಿ. ಅಥವಾ ಫೆನಜಾಕ್ವಿನ್ 10 ಇ.ಸಿ ನುಸಿನಾಶಕವನ್ನು ಬಿತ್ತಿದ 20-25 ದಿನಗಳ ನಂತರ ಮತ್ತು ಬಿತ್ತಿದ 40-45 ದಿನಗಳ ನಂತರ ಸಿಂಪಡಿಸುವುದು. ಸೊರಗು ರೋಗದ ನಿಯಂತ್ರಣಕ್ಕಾಗಿ ಪ್ರತಿ ಕಿ.ಗ್ರಾಂ ಬಿತ್ತನೆ ಬೀಜಕ್ಕೆ ಶಿಲೀಂಧ್ರನಾಶಕ ಮಿಶ್ರಣವಾದ ಶೇ.12ರ ಕಾರ್ಬೆಂಡಜಿಂ + ಶೇ.64ರ ಮ್ಯಾಂಕೋಜೆಬ್ 3 ಗ್ರಾಂನಿಂದ ಬೀಜೋಪಚಾರ ಮಾಡುವುದು ಅಥವಾ ಪ್ರತಿ ಕಿ.ಗ್ರಾಂ ಬಿತ್ತನೆ ಬೀಜಕ್ಕೆ ಜೈವಿಕ ಶಿಲೀಂಧ್ರ ಟ್ರೈಕೋಡರ್ಮ ಪುಡಿ 10 ಗ್ರಾಂ ಬೆರೆಸಿ ಬೀಜೋಪಚಾರ ಮಾಡುವುದು ಮತ್ತು 1 ಕಿ.ಗ್ರಾಂ ಟ್ರೈಕೋಡರ್ಮವನ್ನು 100 ಕಿ.ಗ್ರಾಂ ಕೊಟ್ಟಿಗೆ ಗೊಬ್ಬರಕ್ಕೆ ಬೆರೆಸಿ ಬಿತ್ತನೆಗೆ ಮುಂಚೆ ಸಾಲಿನಲ್ಲಿ ಹಾಕಿದ ನಂತರ ಬಿತ್ತನೆ ಮಾಡುವುದು ಸೂಕ್ತ.

| **ಡಾ. ಪ್ರಮೀಳಾ ಸಿ.ಕೆ.** ಸಹಾಯಕ ಪ್ರಾಧ್ಯಾಪಕರು, ಬೀಜವಿಜ್ಞಾನ

ರೈತರ ಸಮಸ್ಯೆಗಳಿಗೆ ಕೃಷಿ ತಂತ್ರಜ್ಞಾನ ಮಾಹಿತಿ ಕೇಂದ್ರ, ವಿಸ್ತರಣಾ ನಿರ್ದೇಶನಾಲಯ, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು. ಇಲ್ಲಿನ ತಜ್ಞರು ಉತ್ತರಿಸಲಿದ್ದಾರೆ. ನಿಮ್ಮ ಪ್ರಶ್ನೆಗಳನ್ನು 18004250571/ 080-23627889 ಸಂಖ್ಯೆಗೆ ಕರೆ ಮಾಡಿ ತಿಳಿಸಿ ಅಥವಾ 94824 77812 ಸಂಖ್ಯೆಗೆ ವಾಟ್ಸ್ಆ್ಯಪ್ ಮಾಡಿ

Vijaya Vani Pg.04c

# ಜಿಕೆವಿಕೆಯಲ್ಲಿ ಇಂದು ರೈತ ಸಂತೆ ಆಯೋಜನೆ

ಬೆಂಗಳೂರು: ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದಿಂದ ಹೆಬ್ಬಾಳದ ಜಿಕೆವಿಕೆಯ ಗಣಪತಿ ದೇವಸ್ಥಾನದ ಹತ್ತಿರ ಶನಿವಾರ ಬೆಳಗ್ಗೆ 7 ರಿಂದ ಸಂಜೆ 4 ಗಂಟೆಯ ವರೆಗೆ 'ರೈತ ಸಂತೆ' ಆಯೋಜಿಸಲಾಗಿದೆ. ರೈತರು ಬೆಳೆದ ಮಾವು, ಹಲಸು, ಬಿತ್ತನೆ ಬೀಜಗಳು, ಮೌಲ್ಯ ವರ್ಧಿತ ಸಿರಿಧಾನ್ಯ ಪದಾರ್ಥಗಳು, ಸಾವಯವ ಉತ್ಪನ್ನಗಳು, ಗುಣಮಟ್ಟದ ರಾಜಮುಡಿ ಅಕ್ಕಿ, ತಾಜಾ ಅಣಬೆಗಳು ಮಾರಾಟಕ್ಕೆ ಲಭ್ಯವಿವೆ. ಕೃಷಿ ಮತ್ತು ತೋಟಗಾರಿಕೆ ಉಪಕರಣಗಳು, ಸುಗಂಧ ಮತ್ತು ಔಷಧೀಯ ಸಸ್ಯಗಳು, ಅಲಂಕಾರಿಕ ಗಿಡಗಳು, ಜೈವಿಕ ಗೊಬ್ಬರಗಳು, ಕರಕುಶಲ ವಸ್ತುಗಳು, ಕೃಷಿ ಪ್ರಕಟಣೆಗಳು ಮತ್ತಿತರ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟಕ್ಕೆ ವ್ಯವಸ್ಥೆ ಮಾಡಲಾಗಿದೆ. ಸಾರ್ವಜನಿಕರಿಗೆ ಮುಕ್ತ ಪ್ರವೇಶವಿದೆ.

Kannadaprabha Pg.04

**ವಿಶ್ವವಾಣಿ**

ವಿಶ್ವಾಸವೇ ವಿಶ್ವ

### ಕರ್ನಾಟಕದ ಅಡಕೆ ಬೆಳೆಗಾರರಿಗೆ ಮಹಾರಾಷ್ಟ್ರ ಸರಕಾರದಿಂದ ತೊಂದರೆ

# ರಾಜ್ಯದ ಅಡಕೆ ಬೆಳೆಗಾರರಿಗೆ ಮಹಾ ಕಿರಿಕ್

**ಕಾರವಾರ:** ರಾಜ್ಯದಲ್ಲಿ ಕೃಷಿಕರಿಗೆ ಮಳೆ ಬಾರದೇ ಬೆಳೆದ ಬೆಳೆ ಉಳಿಸಿಕೊಳ್ಳಲು ಪರದಾಡುತ್ತಿದ್ದಾರೆ. ಆ ಸಮಸ್ಯೆಯ ಮಧ್ಯೆ ಇದೀಗ ಕರ್ನಾಟಕದಿಂದ ಮಹಾರಾಷ್ಟ್ರ ಮೂಲಕ ಉತ್ತರ ಭಾರತಕ್ಕೆ ಸರಬರಾಜು ಆಗುವ ಅಡಿಕೆ ಬೆಳೆಗಳನ್ನು ತಡೆಹಿಡಿದು ಕರ್ನಾಟಕ ಅಡಕೆ ಬೆಳೆಗಾರರಿಗೆ ಸಂಕಷ್ಟ ತಂದೊಡ್ಡಿದ್ದಾರೆ.

ರಾಜ್ಯದಲ್ಲಿ ಉತ್ತರ ಕನ್ನಡ, ಶಿವಮೊಗ್ಗ, ಚಿಕ್ಕಮಗಳೂರು, ದಕ್ಷಿಣ ಕನ್ನಡ, ಉಡುಪಿ, ದಾವಣಗೆರೆ, ಚಿತ್ರದುರ್ಗ ಸೇರಿದಂತೆ ಹಲವು ಜಿಲ್ಲೆಗಳಲ್ಲಿ ಅಡಿಕೆ ಮುಖ್ಯ ಆದಾಯದ ಮೂಲವಾಗಿದೆ. ರೈತರ ಖರೀದಿ ಶಕ್ತಿ ಹೆಚ್ಚುವುದರಿಂದ ಸ್ಥಳೀಯ ವ್ಯಾಪಾರ, ಶಿಕ್ಷಣ, ಆರೋಗ್ಯ, ಕಟ್ಟಡ ನಿರ್ಮಾಣ ಮತ್ತು ಸೇವಾ ವಲಯವೂ ಬೆಳೆಯಲು ಸಹಾಯವಾಗಿದೆ.

ಉತ್ತರ ಕನ್ನಡ ಜಿಲ್ಲೆಯಲ್ಲಿ ವರ್ಷಕ್ಕೆ ಸುಮಾರು 12,000ರಿಂದ 15,000 ಮೆಟ್ರಿಕ್ ಟನ್‌ಗಳಷ್ಟು ಅಡಿಕೆ ಉತ್ಪಾದನೆ ಆಗುತ್ತದೆ. ಜಿಲ್ಲೆಯ ಸುಮಾರು 10,000 ರಿಂದ 15,000 ಹೆಕ್ಟೇರ್‌ಗಿಂತ ಹೆಚ್ಚು ಪ್ರದೇಶದಲ್ಲಿ ಅಡಿಕೆ ಬೆಳೆ ಇದೆ. ಉತ್ತರ ಕನ್ನಡ ಜಿಲ್ಲೆ ರಾಜ್ಯದ ಒಟ್ಟು ಅಡಿಕೆ ಉತ್ಪಾದನೆಯಲ್ಲಿ ಸುಮಾರು 14% ಪಾಲು ಹೊಂದಿದೆ. ಆದರೆ ಇದೀಗ ಮಹಾರಾಷ್ಟ್ರ ಸರಕಾರ ಅಡಿಕೆಯಲ್ಲಿ ರಾಸಾಯನಿಕವನ್ನು ಬಳಸಲಾಗುತ್ತಿದೆ ಎಂದು ಆರೋಪ ಮಾಡಿ ಒಂದು ವರ್ಷದ ವರೆಗೆ ಮಹಾರಾಷ್ಟ್ರ ಭಾಗದಲ್ಲಿ ಅಡಿಕೆ ವಹಿವಾಟು, ದಾಸ್ತಾನು, ಸರಬರಾಜುಗಳನ್ನು ನಿರ್ಬಂಧಿಸಿದೆ, ಇದರಿಂದಾಗಿ ಮಹಾರಾಷ್ಟ್ರ ಮೂಲಕ ಉತ್ತರ ಭಾರತದ ಹಲವು ರಾಜ್ಯಕ್ಕೆ ತೆರಳುವ ಅಡಕೆಯನ್ನು ಮಹಾರಾಷ್ಟ್ರದ ಆರೋಗ್ಯ ಇಲಾಖೆ ಆಯುಕ್ತರು ತಡೆಹಿಡಿಯುತ್ತಿದ್ದು, ಕಳೆದ ಎರಡು ವಾರದಿಂದ ರಾಜ್ಯದ ಸಾವಿರಕ್ಕೂ ಹೆಚ್ಚು ಅಡಿಕೆಯನ್ನು ಕೊಂಡೊಯ್ಯುತ್ತಿರುವ ಲಾರಿಗಳನ್ನು ವಶಪಡಿಸಿಕೊಂಡಿದ್ದಾರೆ. ಹೀಗಾಗಿ ನಿಗಧಿತ ಸಮಯದಲ್ಲಿ ಮಾರುಕಟ್ಟೆಗೆ ಹೋಗಬೇಕಿದ್ದ ಅಡಿಕೆ ಮಹಾರಾಷ್ಟ್ರದಲ್ಲಿ ಕೊಳೆಯುತ್ತಿದೆ.



### ವಹಿವಾಟಿಗೆ ಹಿನ್ನಡೆ

ಮಹಾರಾಷ್ಟ್ರದಲ್ಲಿ ಅಡಿಕೆ ಲಾರಿಗಳನ್ನು ತಡೆಯುತ್ತಿರುವುದರಿಂದ ರೈತರು, ಕೂಲಿ ಕಾರ್ಮಿಕರು, ವ್ಯಾಪಾರಿಗಳು, ಸಾಗಣೆದಾರರು, ಸಂಸ್ಕರಣಾ ಘಟಕಗಳು ಸೇರಿದಂತೆ ಹಲವು ಉದ್ಯಮಕ್ಕೆ ಹೊಡೆತ ಬಿದ್ದಿದೆ. ಇದರಿಂದ ಸಾಗಾಣಿಕೆದಾರರು ಸದ್ಯ ಅಡಕೆಯನ್ನು ಮಹಾರಾಷ್ಟ್ರದ ಮೂಲಕ ಸಾಗಾಟವನ್ನು ನಿಲ್ಲಿಸಿ ಪರ್ಯಾಯ ಮಾರ್ಗದ ಮೂಲಕ ಸಾಗಾಟ ಮಾಡುತ್ತಿದ್ದು, ಇಂದಿನ ದುಬಾರಿ ಡೀಸೆಲ್ ಬೆಲೆಯಿಂದ ಸಾಗಾಟ ವೆಚ್ಚ ದುಪ್ಪಟ್ಟಾಗಿದೆ. ಹೀಗಾಗಿ ಸದ್ಯ ಈ ಸಮಸ್ಯೆ ಬಗೆಹರಿಯುವ ವರೆಗೆ ಕೆಲವು ವರ್ತಕರು ವಹಿವಾಟು ಬಂದ್ ಮಾಡಿದ್ದು, ಮಾರುಕಟ್ಟೆಯ ಮೇಲೆ ಪ್ರತಿಕೂಲ ಪರಿಣಾಮ ಬೀರಿದೆ.

ಸದ್ಯ ಉತ್ತರ ಕನ್ನಡ ಅಡಿಕೆ ಮಾರುಕಟ್ಟೆಯಲ್ಲಿ ಉತ್ತಮ ಗುಣಮಟ್ಟದ ಬೆಟ್ಟೆ 40ರಿಂದ 49 ಸಾವಿರ ಪ್ರತಿ ಕ್ವಿಂಟಲ್‌ಗೆ ಇದ್ದರೆ, ರಾಶಿ-49 ರಿಂದ 50 ಸಾವಿರ, ಚಾಲಿ-44ರಿಂದ 48 ಸಾವಿರ ಕ್ವಿಂಟಲ್ ದರ ಇದ್ದು ಏರಿಳಿತ ಕಾಣುತ್ತಿದೆ. ಉತ್ತರ ಕನ್ನಡ ಜಿಲ್ಲೆಯಿಂದ ಮಧ್ಯಪ್ರದೇಶ ದೆಹಲಿ, ಉತ್ತರ ಪ್ರದೇಶ, ರಾಜಸ್ಥಾನ, ಮಹಾರಾಷ್ಟ್ರ, ಗುಜರಾತ್‌ಗೆ ಹೆಚ್ಚು ಸರಬರಾಜು ಆಗುತ್ತದೆ. ಇದನ್ನು ಹೊರತುಪಡಿಸಿದರೆ ಪಾಕಿಸ್ತಾನ, ನೇಪಾಳ, ಮ್ಯಾನ್ಮಾರ್, ಖಜಕಿಸ್ತಾನ್, ಅಫ್ಘಾನಿಸ್ತಾನ ಸೇರಿದಂತೆ ಹಲವು ದೇಶಗಳಿಗೂ ಅಲ್ಪ ಪ್ರಮಾಣದಲ್ಲಿ ರಫ್ತಾಗುತ್ತದೆ.

2023-24ರಲ್ಲಿ ಭಾರತದಿಂದ 10,637 ಟನ್ ಅಡಿಕೆ ರಫ್ತಾಗಿ ಸುಮಾರು 400 ಕೋಟಿ ರು. ವಿದೇಶಿ ವಿನಿಮಯ ಗಳಿಕೆಯಾಗಿದೆ ಎಂಬುದು ಅಂಕಿಅಂಶವಾಗಿದೆ. ಇದೀಗ ಮಹಾರಾಷ್ಟ್ರ ಸರಕಾರ ಅಡಿಕೆ ಬೆಳೆಯಲ್ಲಿ ವಿಷಕಾರಿ ರಾಸಾಯನಿಕವಿದೆ ಎಂದು ಸಬೂಬು ಹೇಳಿ ತಮ್ಮ ರಾಜ್ಯದ ಜತೆ ಇತರೆ ರಾಜ್ಯಕ್ಕೆ ತೆರಳುವ ಅಡಿಕೆಯನ್ನು ಸಹ ತಡೆಹಿಡಿದಿದೆ.

**ಸಮಸ್ಯೆಯ ಕುರಿತು ಸಭೆ:** ಈ ಸಮಸ್ಯೆ ಬಗೆಹರಿಸಲು ಉತ್ತರ ಕನ್ನಡ, ಶಿವಮೊಗ್ಗ, ಉಡುಪಿ ಸೇರಿದಂತೆ ಹಲವು ಕಡೆ ವರ್ತಕರು ಹಾಗೂ ಬೆಳೆಗಾರರ ಸಭೆ ಮಾಡಲಾಗಿದ್ದು, ಸಮಸ್ಯೆ ಬಗೆಹರಿಸುವಲ್ಲಿ ಪ್ರಯತ್ನ ಸಾಗಿದೆ. ಆದರೆ ಈ ಬಗ್ಗೆ ಮಹಾರಾಷ್ಟ್ರ ಸರಕಾರದಿಂದ ಯಾವುದೇ ಪ್ರಕಟಣೆಗಳು ಅಥವಾ ಆದೇಶಗಳಾಗಿಲ್ಲ. ರಾಜ್ಯದ ಅಡಿಕೆ ಬೆಳೆಗಾರರಲ್ಲಿ ಉತ್ತರ ಕನ್ನಡ ಜಿಲ್ಲೆಯಲ್ಲೇ ಅಂದಾಜು ಮೂರು ಲಕ್ಷಕ್ಕೂ ಹೆಚ್ಚು ಅಡಿಕೆ ಬೆಳೆಗಾರರಿದ್ದಾರೆ. ಹೀಗಾಗಿ ಅಡಿಕೆ ಬೆಳೆಗಾರರು ಹಾಗೂ ವರ್ತಕರು ಸರ್ಕಾರ ಮಧ್ಯಸ್ತಿಕೆ ವಹಿಸಿ ಆದ ಗೊಂದಲ ಬಗೆಹರಿಸಿ ಹಿತ ಕಾಯಬೇಕೆಂದು ಬೆಳೆಗಾರರು ಆಗ್ರಹಿಸಿದ್ದಾರೆ.

Kannadaprabha Pg.04

